ನಿಮ್ಮೊಡನೆ

# ಸಾಂಸ್ಕೃತಿಕ ಆಘಾತ

**ಕೇವಲ 59ರ ಹರೆಯದಲ್ಲೇ ಇನ್ನಿಲ್ಲವಾದ ವಿಷ್ಣುವರ್ಧನ್ ಅವರ ನಿಧನ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತಕ್ಷಣಕ್ಕೆ ಜೀರ್ಣಿಸಲು ಸಾಧ್ಯವಾಗದ ಘಟನೆ. ಅವರಿಂದ ಕನ್ನಡ ಚಿತ್ರರಂಗಕ್ಕೆ ಸಲ್ಲಬೇಕಾದದ್ದು ಇನ್ನೂ ಸಾಕಷ್ಟಿತ್ತು. ಕನ್ನಡ ಸಿನಿಮಾಗಳಲ್ಲಿ ಅಭಿರುಚಿಹೀನತೆ ಹೆಚ್ಚುತ್ತಿರುವ ಈ ದಿನಗಳಲ್ಲಿ, ವಿಷ್ಣು ಅವರ ಅಕಾಲಿಕ ನಿಧನ ಕನ್ನಡದ ಸಾಂಸ್ಕೃತಿಕ ಬದುಕಿಗೆ ಸಾಕಷ್ಟು ನಷ್ಟ ಉಂಟು ಮಾಡಿದೆ ಎನ್ನಬಹುದು.**



ವರ್ಷದ ಕೊನೆಯಲ್ಲಿ ನಡೆದದ್ದು ಕನ್ನಡಿಗರ ಮಟ್ಟಿಗೆ ಅನಿರೀಕ್ಷಿತ. ಕನ್ನಡ ಸಾಂಸ್ಕೃತಿಕ ಲೋಕದ ಇಬ್ಬರು ಅನನ್ಯ ಸಾಧಕರು ಅಗಲಿದ್ದು ಸಾಂಸ್ಕೃತಿಕ ಲೋಕಕ್ಕೆ ಆದ ದೊಡ್ಡ ಆಘಾತವೇ. ಒಬ್ಬರು ಸುಗಮ ಸಂಗೀತ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಮಾಡಿದ ಸಿ.ಅಶ್ವತ್ಥ್; ಇನ್ನೊಬ್ಬರು ಸಿನಿಮಾ ಲೋಕದಲ್ಲಿ ತಾರೆಯಾಗಿ ಮೆರೆದ ವಿಷ್ಣುವರ್ಧನ್. ಸಿ.ಅಶ್ವತ್ಥ್ ಅವರದ್ದಾದರೋ 'ತುಂಬು ಜೀವನ' ಎನ್ನಬಹುದು. ಸಾಯವಾಗ ಅವರು 70 ದಾಟಿದ್ದರು. ಸಾಧನೆಯ ಹಾದಿಯಲ್ಲಿ ಬಹುದೂರ ನಡೆದದ್ದೇ ಅಲ್ಲದೆ, ಶಿಷ್ಯ ಸಂಕುಲವನ್ನೂ ಬೆಳೆಸಿದ್ದರು. ಆದರೆ ಕೇವಲ 59ರ ಹರೆಯದಲ್ಲೇ ಇನ್ನಿಲ್ಲವಾದ ವಿಷ್ಣುವರ್ಧನ್ ಅವರ ನಿಧನ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತಕ್ಷಣಕ್ಕೆ ಜೀರ್ಣಿಸಲು ಸಾಧ್ಯವಾಗದ ಘಟನೆ. ಅವರಿಂದ ಕನ್ನಡ ಚಿತ್ರರಂಗಕ್ಕೆ ಸಲ್ಲಬೇಕಾದದ್ದು ಇನ್ನೂ ಸಾಕಷ್ಟಿತ್ತು. 'ಸಾವು ಕ್ರೂರಿ' ಎನ್ನುವುದು ವಿಷ್ಣುವರ್ಧನ್ ನಿಧನದಲ್ಲಿ ಮತ್ತೊಮ್ಮೆ ಸಾಬೀತಾಯಿತು.

ಕನ್ನಡದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಇವತ್ತು ಸಂಗೀತ ಮತ್ತು ಸಿನಿಮಾ ಬಹು ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಸುಗಮ ಸಂಗೀತದ ಮೂಲಕ ಕನ್ನಡದ ಹಲವಾರು ಮಹತ್ವದ ಕವಿಗಳ ಕವಿತೆಗಳನ್ನು ಮನೆಮನೆಗೆ ತಲುಪಿಸಿದವರು ಸಿ.ಅಶ್ವತ್ಥ್. ಜಾನಪದ ಗೀತೆಗಳನ್ನೂ ಕ್ಯಾಸೆಟ್ ಮೂಲಕ ಜನಪ್ರಿಯಗೊಳಿಸುವಲ್ಲಿ ಅವರ ಪಾಲ ಸಾಕಷ್ಟಿದೆ. ಸಾಹಿತ್ಯಕ ಗೋಷ್ಠಿಗಳಲ್ಲಿ ಶಬ್ದಪ್ರಿಯರ ಸಂವಾದಗಳಲ್ಲಷ್ಟೇ ಕಳೆದು ಹೋಗಬಹುದಾಗಿದ್ದ ಹಲವಾರು ಕವಿತೆಗಳಿಗೆ ಸುಶ್ರಾವ್ಯ ರಾಗ ತುಂಬಿ ಹಾಡಿ, ಜನಪ್ರಿಯಗೊಳಿಸಿದ್ದು ಅಶ್ವತ್ಥರ ಬಹುದೊಡ್ಡ ಸಾಧನೆ. ಅದರಲ್ಲೂ 'ಕನ್ನಡವೇ ಸತ್ಯ' ಕಾರ್ಯಕ್ರಮಗಳ ಮೂಲಕ ಇಂಗ್ಲಿಷ್‌ಪ್ರಿಯರಾಗಿದ್ದ ಕನ್ನಡಿಗರ ಎದೆಯೊಳಕ್ಕೂ ನುಸುಳಿ, ಕನ್ನಡದ ಅಭಿಮಾನವನ್ನು ಹೆಮ್ಮರವಾಗಿಸಿದ್ದು, ಸಣ್ಣ ಸಾಧನೆಯೇನಲ್ಲ.

ಕನ್ನಡ ಸಿನಿಮಾಗಳ ಮಟ್ಟಿಗೆ ಮೇರು ನಟರಾಗಿ, ಒಂದು 'ಕಲ್ಟ್'ನಂತೆ ಬೆಳೆದವರು ಡಾ.ರಾಜ್ ಕುಮಾರ್. ಅವರು ನಮ್ಮನ್ನಗಲಿದ ನೆನಪು ಇನ್ನೂ ಸರಿಯಾಗಿ ಮನಸ್ಸಿನಿಂದ ಮಾಸಿಲ್ಲ. ಆಗಲೇ ಇನ್ನೊಬ್ಬ 'ಸ್ಟಾರ್' ವಿಷ್ಣುವರ್ಧನ್ ಅಗಲಿದ್ದಾರೆ. ವಿಷ್ಣು ಅವರ ಸಿನಿಮಾ ಸಾಧನೆ ಡಾ.ರಾಜ್‌ರಷ್ಟು ಮೇರು ಎತ್ತರದ್ದು ಅಲ್ಲವಾದರೂ, ರಾಜ್ ಇಲ್ಲದ ಗಾಂಧಿನಗರದಲ್ಲಿ ವಿಷ್ಣು ಕನ್ನಡ ಸಿನಿಮಾ ರಂಗಕ್ಕೆ 'ಯಜಮಾನ'ನಂತೆ ಇದ್ದದ್ದು ಸುಳ್ಳಲ್ಲ. ಹೊಸ ನಟರ ಅಲೆಯ ಮಧ್ಯೆಯೂ ವಿಷ್ಣು ನಿರ್ಮಾಪಕರ ಕಣ್ಮಣಿಯಾಗಿದ್ದದ್ದೂ ನಿಜವೇ. ರಾಜ್ ಅವರ ಇಡೀ ಸಿನಿಮಾ ಜೀವನದ ಮಹತ್ವದ ಅಂಶ ಎಂದರೆ ಕಥೆ ಮತ್ತು ನಿರೂಪಣೆಯ ಸದಭಿರುಚಿ. ಸಿನಿಮಾಗಳು ವ್ಯಕ್ತಿಗಳನ್ನು ಮಾತ್ರವಲ್ಲ, ಸಮೂಹವನ್ನೂ ತಿದ್ದಿ ತೀಡಿ ಪರಿಪಕ್ವಗೊಳಿಸುತ್ತಿದ್ದ 60– 70ರ ದಶಕದಲ್ಲಿ ರಾಜ್ ಚಿತ್ರಗಳು ಕನ್ನಡಿಗರ ಸಾಂಸ್ಕೃತಿಕ ಬದುಕನ್ನು ಗುಣಾತ್ಮಕವಾಗಿ ಪ್ರಭಾವಿಸಿದ್ದವು. ಅವರ ಎಲ್ಲ ಸಿನಿಮಾಗಳಲ್ಲೂ ನೈತಿಕ ನಿಲುವು, ಸಾಮಾಜಿಕ ಬದ್ಧತೆ ಎದ್ದು ಕಾಣುತ್ತಿದ್ದವು. ನಿರೂಪಣೆಯ ವಿಷಯದಲ್ಲಿ ವಿಷ್ಣುವರ್ಧನರ ಸಿನಿಮಾಗಳು ಬೇರೆಯೇ ದಾರಿಯನ್ನು ಕಂಡುಕೊಂಡರೂ, ರಾಜ್ ಚಿತ್ರಗಳ ನೈತಿಕ ನಿಲುವಿನ ಛಾಯೆ ಇಲ್ಲೂ ಇದ್ದವು. ರಾಜ್ ಚಿತ್ರಗಳಂತೆ ಎಲ್ಲವನ್ನು ಅಲ್ಲವಾದರೂ, ವಿಷ್ಣು ಅವರ ಬಹುತೇಕ ಚಿತ್ರಗಳನ್ನು ಇಡೀ ಕುಟುಂಬದವರು ಒಟ್ಟಿಗೆ ಕುಳಿತು ನೋಡಿ ಮುಜುಗರವಿಲ್ಲದೆ ಆನಂದಿಸಬಹುದಿತ್ತು. ಕನ್ನಡ ಸಿನಿಮಾಗಳಲ್ಲಿ ಅಭಿರುಚಿಹೀನತೆ ಹೆಚ್ಚುತ್ತಿರುವ ಈ ದಿನಗಳಲ್ಲಿ, ವಿಷ್ಣು ಅವರ ಅಕಾಲಿಕ ನಿಧನ ಕನ್ನಡದ ಸಾಂಸ್ಕೃತಿಕ ಬದುಕಿಗೆ ಸಾಕಷ್ಟು ನಷ್ಟ ಉಂಟು ಮಾಡಿದೆ ಎನ್ನಬಹುದು.

ವಿಷ್ಣುವರ್ಧನ್ ಸ್ಮಾರಕಕ್ಕೆ 10 ಕೋಟಿ ರೂಪಾಯಿ ನೀಡುವುದಾಗಿ ರಾಜ್ಯ ಸರಕಾರ ಪ್ರಕಟಿಸಿದೆ. ವಿಷ್ಣು ಹೆಸರಿನಲ್ಲಿ ಚಿತ್ರನಗರಿ ನಿರ್ಮಿಸುವ ಪ್ರಸ್ತಾಪವಿದೆ ಎಂದು ಪ್ರವಾಸೋದ್ಯಮ ಸಚಿವರು ಪ್ರಕಟಿಸಿದ್ದಾರೆ. ಸರಕಾರಕ್ಕೆ ಸೇರಿದ ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣು ಅವರ ಸಮಾಧಿಗೆ ಮತ್ತು ಸ್ಮಾರಕಕ್ಕೆ ಎರಡು ಎಕ್ರೆ ಸ್ಥಳವನ್ನು ಸರಕಾರದಿಂದ ತಕ್ಷಣಕ್ಕೆ ಪಡೆಯುವಲ್ಲಿ ಅಂಬರೀಷ್ ಅವರ ಸಮಯಪ್ರಜ್ಞೆಯ ಶ್ರಮ ಕೆಲಸ ಮಾಡಿದೆ. ದೊಡ್ಡ ನಟನೊಬ್ಬ ಸತ್ತಾಗ ಭಾವುಕ ಪ್ರತಿಕ್ರಿಯೆ ನೀಡಿ, ಆ ಬಳಿಕ ಮಂದಗತಿಯ ಅಲಕ್ಷ್ಯ ತೋರುವುದು ಸರಕಾರಗಳ ಹುಟ್ಟುಗುಣ. ಕಂಠೀರವ ಸ್ಟುಡಿಯೋದಲ್ಲಿ ಡಾ.ರಾಜ್ ಸ್ಮಾರಕದ ಕೆಲಸ ಎಷ್ಟು ವೇಗವಾಗಿ ನಡೆದಿದೆ ಎನ್ನುವುದು ಎಲ್ಲರಿಗೂ ಗೊತ್ತು. ಹಾಗಾಗಿ ಸರಕಾರ ಬರಿಯ ಹೇಳಿಕೆಗಳಲ್ಲಿ ಕಾಲ ತಳ್ಳುವುದು ಸರಿಯಲ್ಲ. ವಿಷ್ಣುವರ್ಧನ್ ಸ್ಮರಣೆಗೆ ಚಿತ್ರನಗರಿಯನ್ನು ಸ್ಥಾಪಿಸುವುದೆಂದಾದಲ್ಲಿ ಕಾಲಮಿತಿಯಲ್ಲಿ ಕೆಲಸ ಮುಗಿಸುವುದು ಒಳ್ಳೆಯದು.

■ ಬಿ.ಎಂ. ಹನೀಫ್